## ರಹಮತ್ ತರೀಕೆರೆ

ಕನ್ನಡದ ಪ್ರಮುಖ ಲೇಖಕ ರಹಮತ್ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯವರು. ಸಾಹಿತ್ಯ ವಿಮರ್ಶೆ, ಸಂಶೋಧನೆ, ಪ್ರವಾಸ ಕಥನ, ವಿಚಾರ ಸಾಹಿತ್ಯ, ಜೀವನ ಚರಿತ್ರೆ ಸಾಹಿತ್ಯ ಮೀಮಾಂಸೆ ಪ್ರಕಾರಗಳಲ್ಲಿ ಪುಸ್ತಕಗಳನ್ನು ಬರೆದಿದ್ದಾರೆ. ಅವರ ಪ್ರಮುಖ ಪುಸ್ತಕಗಳು: 'ಪ್ರತಿಸಂಸ್ಕೃತಿ', 'ಮರದೊಳಗಣ ಕಿಚ್ಚು', 'ಅಮೀರ್‌ಬಾಯಿ ಕರ್ನಾಟಕಿ', 'ನಡೆದಷ್ಟೂ ನಾಡು', 'ಕರ್ನಾಟಕದ ನಾಥಪಂಥ', 'ಕರ್ನಾಟಕದ ಸೂಫಿಗಳು', 'ಅಂಡಮಾನ್ ಕನಸು', 'ಕತ್ತಿಯಂಚಿನ ದಾರಿ', 'ಲೋಕವಿರೋಧಿಗಳ ಜತೆಯಲ್ಲಿ.' ಇತ್ತೀಚೆಗೆ ಅವರ ಲಲಿತ ಪ್ರಬಂಧಗಳ ಸಂಕಲನ 'ಹಿತ್ತಲ ಜಗತ್ತು' ಪ್ರಕಟವಾಗಿದೆ. ರಹಮತ್, ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸಾಹಿತ್ಯ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರು.



ಜಿ. ರಾಜಶೇಖರ ಮತ್ತು ರಹಮತ್ ತರೀಕೆರೆ

ಪಿಟೀಲು ಬಾರಿಸ್ತಾನೆ. ಪಿಟೀಲು ನಿತ್ಯವೂ ತರಬೇತಿ ಇಲ್ಲದೆ ನುಡಿಸೋಕಾಗಲ್ಲ. ಅಂತಹ ವಾದನವನ್ನು ಕಡಲತೀರದಲ್ಲಿ ಕಲಿಯೋಕಾಗಲ್ಲ.' ಈ ಮಾತನ್ನು ಓದಿದ ಮೇಲೆ ನನಗನಿಸ್ತು, ಹೌದು, ಕಡಲಿನಲ್ಲಿ ಹೋಗಿ ಮೀನು ಹಿಡಿಯೋರಿಗೆ ಕಡಲು ಪ್ರತಿದಿನದ ಅನುಭವ; ಪ್ರತಿದಿನದ ಆಹ್ವಾನ. ದಡದಲ್ಲಿ ಕೂತು ನೋಡೋ ಟೂರಿಸ್ಟನಿಗೆ ಅದು ಒಂದಾದ ಮೇಲೊಂದು ತೆರೆ. ಕಾರಂತರಿಗೂ ಕಡಲಿಗೂ ಇದ್ದ ಸಂಬಂಧ ಅಷ್ಟೇನೆ.

◆ **ನಮ್ಮಲ್ಲಿ ಕವಿಗಳಾಗಿರುವ ಕೆಲವರು ಒಳ್ಳೆಯ ಗದ್ಯ ಬರೆದಿರೋದುಂಟು.**

ಬೇಂದ್ರೆ ಅವರ ಆತ್ಮವೃತ್ತಾಂತದಲ್ಲಿ ಅದ್ಭುತವಾದ ಪ್ರೋಸ್ ಇದೆ. ಅದರ ಕೆಲವು ಪ್ರಸಂಗಗಳು ನನಗೆ ಚೆನ್ನಾಗಿ ನೆನಪಿವೆ. ಒಂದು–ಅವರು ಕಿಟೆಲ್ ಅರ್ಥಕೋಶವನ್ನು ಕಾದಂಬರಿ ಓದಿದ ಹಾಗೆ ಇಡಿಯಾಗಿ ಓದಿದ್ದು. ಎರಡು–ಬೇಂದ್ರೆಯವರ ಮನೆಮಾತು ಮರಾಠಿ; ಬೀದಿಗಿಳಿದರೆ ಕನ್ನಡ. ಅವರಿಗೆ ಏಳೆಂಟು ವರ್ಷ ಆಗುವವರಿಗೆ ಅವೆರಡೂ ಬೇರೆಬೇರೆ ಭಾಷೆಗಳು ಅಂತ ಗೊತ್ತಿರಲಿಲ್ಲವಂತೆ. ಮೂರು–ಅವರ ಬಾಲ್ಯ ಕಳೆದ ಮನೆಯ ಸುತ್ತಮುತ್ತಲಿನ ವಾತಾವರಣ. ಬೀದಿಯಲ್ಲಿ ಬೆಳಗ್ಗೆಯಿಂದ ಸಂಜೆವರೆಗೆ ಯಾವ್ಯಾವ ತರಹದ ರಂಗುರಂಗಿನ ಮೆರವಣಿಗೆಗಳು ಹೋಗ್ತಾ ಇದ್ದವು ಅಂತ. ಅದರಲ್ಲಿ ಲಿಂಗಾಯತರ ಶವದ ಮೆರವಣಿಗೆ, ಸಾಬರ ಶವದ ಮೆರವಣಿಗೆ ಎಲ್ಲವೂ ಭಾಳ ಆಸಕ್ತಿ ಹುಟ್ಟಿಸುವಂಥವು. ಆದರೆ ಬ್ರಾಹ್ಮಣರ ಶವದ ಮೆರವಣಿಗೆ ಮಾತ್ರ ನೋಡೋಕೆ ಆಗ್ತಿರಲಿಲ್ಲವಂತೆ. ಬೇಂದ್ರೆ ಗದ್ಯಕ್ಕೇ ಒಂದು ಸೌಷ್ಠವವಿದೆ; ಒಂದು ಸ್ಟ್ರೆಂತ್ ಇದೆ. ಅದನ್ನು ಸರಳತೆ ಅಂತಲೂ ಹೇಳೋಕಾಗಲ್ಲ. ಕೆಲವು ಪ್ರದೇಶಗಳ ಅಡಿಗೆಗಳಿಗೆ ಇರೋ ಹಾಗೇನೇ ಅವರ ಗದ್ಯಕ್ಕೆ ಒಂದು ವಿಶಿಷ್ಟ